# ಶರಣರ ನಡೆ-ನುಡಿ

**ಸುಜಾತ ದೇವರಮನಿ**

ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಬ್ಬಳ್ಳಿ.

DOI: https://doi.org/10.5281/zenodo.17257914

## ABSTRACT:

ಶರಣರ ನಡೆ-ನುಡಿಗಳು ಮಾನವ ಜೀವನಕ್ಕೆ ಮಾರ್ಗದರ್ಶಕ ಶಕ್ತಿಯಾಗಿದೆ. ಗುರುತತ್ವ, ಸತ್ಯ, ತಾಳ್ಮೆ, ಪ್ರೀತಿ, ಸಹನೆ, ಸಮಾನತೆ, ದೈವಭಕ್ತಿ ಇವುಗಳ ಸಮ್ಮಿಶ್ರಣವೇ ಶರಣರ ಬದುಕಿನ ಮೂಲಾಧಾರ. ಶರಣರು ತಮ್ಮ ಜೀವನವನ್ನು ಕೇವಲ ತ್ಯಾಗಮಯವನ್ನಾಗಿಸದೆ, ಸಮಾಜಮುಖಿ ಮೌಲ್ಯಗಳನ್ನು ಅಳವಡಿಸಿಕೊಂಡು ಬದುಕಿನ ಮಾದರಿಯನ್ನು ತೋರಿಸಿದ್ದಾರೆ. "ಮಾತೇ ಮುತ್ತು, ಮಾತೇ ಮೃತ್ಯು" ಎಂಬ ತತ್ತ್ವದೊಂದಿಗೆ, ಶರಣರು ಮಾತು, ನಡೆ-ನುಡಿ, ಕಾರ್ಯಗಳಲ್ಲಿ ಶ್ರೇಷ್ಠ ಆದರ್ಶಗಳನ್ನು ಬೆಳೆಸಿಕೊಂಡರು. ಇಂದಿನ ಜಾಗತೀಕರಣ, ಆಧುನೀಕರಣದ ಅಲೆಗಳಲ್ಲಿ ಮನುಷ್ಯ ಕೃತಕತೆಯ ಹಿಂದೆ ಓಡುತ್ತಿರುವಾಗ ಶರಣರ ಜೀವನ ಮನುಕುಲಕ್ಕೆ ನಿಜವಾದ ದಾರಿದೀಪವಾಗಿದೆ. ಮಾನವೀಯತೆ, ಸತ್ಯ, ಭಕ್ತಿ, ಶುದ್ಧತೆ, ಸಹಜತೆ, ಮತ್ತು ಸಮಾನತೆಯ ಜೀವನವೇ ಶರಣರ ನಡೆ-ನುಡಿಯ ನಿಜವಾದ ಅರ್ಥ. ಈ ಪ್ರಬಂಧದಲ್ಲಿ ಶರಣರ ನಡೆ-ನುಡಿಗಳ ಆವಶ್ಯಕತೆ, ಆಧುನಿಕ ಯುಗದಲ್ಲಿಯೂ ಅವುಗಳ ಪ್ರಸ್ತುತತೆ ಹಾಗೂ ಮಾನವ ಬದುಕಿಗೆ ನೀಡುವ ದಾರಿದೀಪದ ಸಂದೇಶವನ್ನು ವಿವರಿಸಲಾಗಿದೆ.

## KEYWORDS:

ಶರಣರು, ನಡೆ-ನುಡಿ, ಸತ್ಯ, ತಾಳ್ಮೆ, ಸಮಾನತೆ, ಗುರುತತ್ವ, ಭಕ್ತಿ, ಮಾನವೀಯ ಮೌಲ್ಯಗಳು, ಸಮಾಜಮುಖಿ ಚಿಂತನೆ.

ಸಕಲರಿಗೂ ಸಕಲಕ್ಕೂ ಚೇತನ ಶಕ್ತಿ ಈ ಬ್ರಹ್ಮಾಂಡ. ಇಲ್ಲಿ ಅನೇಕ ರೀತಿಯ ಸತ್ವಪೂರ್ಣವಾದ ಬದಲಾವಣೆಯ ಬೆಳವಣಿಗೆಗಳನ್ನು ಕಾಣಬಹುದು. ಮೂರು ಭಾಗ ನೀರಿನಿಂದಲೂ, ಒಂದು ಭಾಗ ಭೂಮಿಯಿಂದಲೂ ಆವೃತಗೊಂಡ ಈ ಪ್ರಪಂಚದಲ್ಲಿ ಎಲ್ಲ ಜೀವರಾಶಿಗಳಿಗೂ ಬದುಕಲು ಮುಕ್ತ ಅವಕಾಶವಿದೆ. ನೈಜ ನಿಲುವಿನಲ್ಲಿಯೇ ಸೃಷ್ಟಿಯ ಸೊಬಗನ್ನು ಹೊಂದಿ ಅದ್ಭುತ ಲೋಕವನ್ನೇ ನಿರ್ಮಾಣ ಮಾಡಿರುವ ಈ ವಿಶ್ವದಲ್ಲಿ ಏನೆಲ್ಲ ಕ್ರಿಯಾಶೀಲ ಚಟುವಟಿಕೆಗಳು ದಿನನಿತ್ಯ ನಡೆಯುತ್ತಲೇ ಇರುತ್ತವೆ. ಎತ್ತ ನೋಡಿದರತ್ತ ಸುಂದರವಾದ ವಾತಾವರಣ, ಕಲ್ಪನಾತೀತ ಸದೃಶ್ಯಗಳು, ವರ್ಣನಾತೀತವಾದ ಪರಿಸರ ಹೀಗೆ ಎಲ್ಲವೂ ವಿಭಿನ್ನ.

ಇತಿಹಾಸಕ್ಕೆ ಇತಿಹಾಸ ಬರೆದು, ಭವ್ಯತೆಯ ಬೆಳಕನ್ನು ತೋರಿದ ಭಾರತದೇಶ

ವೈಚಾರಿಕತೆಯ ಬೀಡು. ಈ ಮಣ್ಣಿನ ಕಣ–ಕಣದಲ್ಲಿಯೂ ಅದ್ಭುತ ಶಕ್ತಿ ಹುದುಗಿ ಪಾವಿತ್ರದ ಬದುಕು ಅನಾವರಣಗೊಳಿಸುತ್ತಿದೆ. ಆಚಾರ್ಯರು, ಪುರಾತನರು, ಪ್ರಮಥರು ಮೊದಲಾದ ಅನೇಕರು ಈ ನಾಡಿನ ವೈಭವವನ್ನು ಮೆರೆಸಿದ್ದು ಮರೆಯಲಾಗದ ವಿಚಾರ. ಇಂತಹ ಪರಮ ಪವಿತ್ರ ಭೂಮಂಡಲದಲ್ಲಿ ಎಲ್ಲದ್ದಕ್ಕೂ ಗುರುವೇ ಮೂಲ ಆಧಾರ. ಗುರುವು ಇಲ್ಲದೆ ಅರಿವು ಅಸಾಧ್ಯ. ಸತ್ವಗುಣ ಸಾಕಾರ ಸ್ವರೂಪಿ ಎಂದರೆ ಶ್ರೀಗುರು. ಆ ಶ್ರೀಗುರುವೇ ಶರಣ, ಅರಿವಿನ ಆಗರ, ಮನುಕುಲದ ಉದ್ಧಾರ. ಆತ್ಮೋದ್ಧಾರ ಹಾಗೂ ಮಾನವ ಕಲ್ಯಾಣವೇ ಗುರುವಿನ ಗುರಿ.

ಬದುಕಿನಲ್ಲಿ ತೃಪ್ತಿ ಮತ್ತು ಶಾಂತಿ ಹೊಂದಬೇಕಾದರೆ ಮಾನಸಿಕ ಸಂಸ್ಕಾರ ಅಗತ್ಯ. ಬಾಳ ಬಾನಂಗಳಕ್ಕೆ ಬೆಳಕಿನ ದಾರಿ ತೋರಿ, ಜೀವನದ ಏಳು–ಬೀಳುಗಳ ಅರಿವು ಮೂಡಿಸಿ, ವ್ಯಕ್ತಿಗೆ ವ್ಯಕ್ತಿತ್ವದ ಮಹತ್ವ ತಿಳಿಸಿ, ಸರಿ ದಾರಿಗೆ ತರುವ ಶಕ್ತಿ ಗುರುವಿಗೆ ಮಾತ್ರ ಇದೆ. ಪ್ರಪಂಚದ ಆಗು–ಹೋಗುಗಳನ್ನು ಗುರುವು ಅರಿವಿಗೆ ತರುತ್ತಾನೆ. ಅದನ್ನು ಲೋಕಕ್ಕೆಲ್ಲ ಅರುಹಿ ಉದ್ಧರಿಸುತ್ತಾನೆ. ಕಲ್ಲು ಸಕ್ಕರೆಯ ಸಿಹಿ ಕಣ್ಣಿಗೆ ಕಾಣದು, ಕೈಗೂ ಸಿಗದು, ಮೈಗೆ ಮೆತ್ತಿಕೊಂಡರೂ ರುಚಿ ತಿಳಿಯಲಾಗದು. ಅದನ್ನು ನಾಲಿಗೆಯ ಮೇಲಿಟ್ಟಾಗಲೇ ಅದರ ಅಮೃತದಂತಹ ಸಿಹಿ ಗೊತ್ತಾಗುವುದು. ಅದನ್ನು ಅರಿಯುವ ಶಕ್ತಿ ನಮಗೆ ಇಲ್ಲದಿದ್ದರಿಂದಲೇ ಈ ಪ್ರಪಂಚ ವಿಷದ ಕಡಲಾಗಿದೆ. ನೆಮ್ಮದಿಯಿಲ್ಲದ ಬದುಕು ಮನುಜನದಾಗಿದೆ. ಇದೆಲ್ಲವನ್ನೂ ಸರಿ ಮಾಡುವ ಚೈತನ್ಯದ ಪ್ರತೀಕ ಶ್ರೀಗುರು. ಶ್ರೇಷ್ಠ–ಕನಿಷ್ಠ, ಬಡವ–ಬಲ್ಲಿದ, ಪಾಪಿ–ಪುನೀತ ಎನ್ನದೇ ಎಲ್ಲರಿಗೂ ಸಮಾನ ಬೆಳಕನ್ನು ಸೂರ್ಯ ಕೊಡುವಂತೆ, ಕರುಣಾನಿಧಿಯಾದ ಗುರುವಾದರೂ ಸಹ ಸಕಲ ಜೀವರಾಶಿಗಳನ್ನು ತನ್ನ ಕರುಣೆಯಿಂದ ಹರಸಿ ಮುನ್ನಡೆಸುವನು.

ಮಾನವ ಜೀವನ ಅತ್ಯಮೂಲ್ಯವಾದುದು. ಜೀವನ ದೇವರು ಕೊಟ್ಟ ಹೂದೋಟ. ಇಲ್ಲಿ ಜೀವಿಗಳೇ ಹೂವುಗಳು. ಮನುಷ್ಯನ ಬದುಕು ಅರಳಿ ಒಲಿಯಬೇಕೇ ವಿನಃ ಅದು ಎಂದಿಗೂ ಬಾಡಬಾರದು. ಅದಕ್ಕಾಗಿ ಸದ್ವಿಚಾರ, ಸಂಸ್ಕೃತಿಗಳ ಮತ್ತು ಸಜ್ಜನರ ಒಡನಾಟ ಬೇಕು. ಜೀವನದಲ್ಲಿ ಗೆಲುವೇ ಬರಲಿ, ಸೋಲೇ ಬರಲಿ ಛಲದಿಂದ ಮುನ್ನಡೆಯಬೇಕು. ಅನ್ಯರಿಗೆ ಕೇಡು ಬಗೆಯದೆ ಬಾಳಿ ಬದುಕುವ ಪ್ರಯತ್ನವನ್ನು ಮೊದಲು ಮಾಡಬೇಕು. ಇದಕ್ಕೆ ಸಾಕ್ಷಿ ಎಂಬಂತೆ ಆಡುವ ಮಾತು, ನೋಡುವ ನೋಟ, ಮಾಡುವ ಕಾರ್ಯ, ಹೋಗುವ ದಾರಿ ಎಲ್ಲವನ್ನೂ ಒಂದಾಗಿರಿಸಿಕೊಂಡು ಪರರ ನೋಯಿಸದೇ ಇರುವ ರೀತಿ ಬಾಳಿ ಬದುಕನ್ನು ಸಾಗಿಸುತ್ತ, ಸರ್ವರನ್ನೂ ಸಮಚಿತ್ತದಿಂದ ಕಾಣುತ್ತ, ಹತ್ತು–ಹಲವು ಸಮಾಜಮುಖಿ ಆದರ್ಶ ಚಿಂತನೆಗಳನ್ನು, ಮೌಲ್ಯಯುತವಾದ ದೂರದೃಷ್ಟಿಯನ್ನು ಹೊಂದಿ, ಕಷ್ಟದಲ್ಲಿದ್ದವರ ಕೈಹಿಡಿದು ನಡೆ–ನುಡಿ ಒಂದಾಗಿ ಬಾಳಿದವರು ಶಿವಶರಣರು. “ಲಿಂಗಪತಿ ಶರಣಸತಿ” ಎಂಬುದು ಅನುಭಾವಿಗಳ ಪರಮ ಲಕ್ಷಣ. ತಮ್ಮ ಬದುಕನ್ನು

ಲಿಂಗಕ್ಕೆ ಅರ್ಪಿಸಿಕೊಂಡು ಬದುಕಿದವರು ಅನುಭಾವಿಗಳು. ತಾಳ್ಮೆ ಸುಂದರ ಬದುಕಿನ ಆಭರಣ. ಆ ಆಭರಣಗಳನ್ನು ಸದಾ ಧರಿಸಿಕೊಂಡು ಬದುಕಿಗೆ ಸಾರ್ಥಕತೆ ತಂದುಕೊಂಡವರು ಅನುಭಾವಿಗಳು. ತಾಳ್ಮೆ ಇರುವ ಕಡೆ ಪ್ರೀತಿ ಹರಿದು ಬರುತ್ತದೆ. ಬಹಳಷ್ಟು ಜನರು ತಮ್ಮ ಮೇಲೂ ನಂಬಿಕೆ ಇಟ್ಟುಕೊಳ್ಳದೆ, ಇತರರನ್ನೂ ನಂಬದೆ, "ಅರು ಕೊಟ್ಟರೆ ಅತ್ತೆ ಕಡೆ ಮೂರು ಕೊಟ್ಟರೆ ಸೊಸೆ ಕಡೆ" ಎಂಬಂತೆ ವರ್ತಿಸುತ್ತಾರೆ. ಅಂಥವರನ್ನು ಲೇಖಕರು ಎರಡೂ ಇಲ್ಲದ ಎಡವಟ್ಟರು ಎಂದು ವಿಡಂಬಿಸುವುದರ ಜೊತೆಗೆ ಪರಸ್ಪರರ ವಿಶ್ವಾಸ, ಒಡನಾಟಗಳೇ ಎಲ್ಲ ದ್ವಂದ್ವಗಳಿಗೆ ಪರಿಹಾರ ಎಂದು ಸೂಚಿಸಿದ್ದಾರೆ. ಒಬ್ಬ ಮನುಷ್ಯ ತನ್ನೊಳಗಿನ ಕಲ್ಮಶವನ್ನು ಸ್ವಲ್ಪವಾದರೂ ಕಡಮೆ ಮಾಡಿಕೊಂಡು ಆತ್ಮತೃಪ್ತಿ ಅನುಭವಿಸಬೇಕಾದರೆ ತನ್ನ ಅಂತರಂಗದೊಂದಿಗೆ ಮಾತನಾಡಬೇಕು. ಒಳನೋಟ ಪರಾಮರ್ಶೆ ಮಾಡಿಕೊಂಡ ವ್ಯಕ್ತಿಯ ಒಡನಾಟ ತನ್ನ ನೆರೆಹೊರೆಯವರೊಂದಿಗೆ ಆರೋಗ್ಯಪೂರ್ಣವಾಗಿರುತ್ತದೆ.

ಇಂದು ಮುಖವಾಡ ಹಾಕಿಕೊಂಡು ಬದುಕುವವರ ಸಂಖ್ಯೆಯೂ ಹೆಚ್ಚಾಗಿದೆ. ಎದುರು ನಿಂತು ಹೋರಾಡುವವರಿಗಿಂತ ಬೆನ್ನ ಹಿಂದೆ ಚೂರಿ ಹಾಕುವವರು ನಮ್ಮ ಸುತ್ತಮುತ್ತ ತುಂಬಿರುವಾಗ ನಾವು ಜಾಗೃತರಾಗಿರಬೇಕು. ವೇಷಕ್ಕೆ ಮಾರು ಹೋಗಿ ಮೋಸ ಹೋದವರು ಅನೇಕ. ನೋವಾಗಲಿ-ನಲಿವಾಗಲಿ, ಪ್ರೀತಿ-ದ್ವೇಷಗಳಾಗಲಿ ಅವು ನಮ್ಮ ಹೊರಗಿಲ್ಲ; ಅವುಗಳಿರುವುದು ನಮ್ಮೊಳಗೆ. ನಮ್ಮ ಅಂತಃಕರಣವೇ ನಮ್ಮ ಬದುಕಿನ ಬೆಳಕು. ಬದುಕು ನಾವು ಅದನ್ನೇ ಸ್ವೀಕರಿಸುವ ಮನಸ್ಥಿತಿಯಲ್ಲಿದೆ. ಏರುಪೇರಿನ ಪ್ರಸಂಗಗಳು ಬದುಕಲ್ಲಿ ಬಾರದಂತೆ ಇರಬೇಕೆಂದು ಎಲ್ಲರೂ ಬಯಸುತ್ತಾರೆ. ಆದರೆ ಅದು ಸುಲಭ ಸಾಧ್ಯವಲ್ಲ. ಏರುಪೇರುಗಳ ಮಧ್ಯೆದಲ್ಲಿಯೂ ನಿಜತತ್ವದತ್ತ ನಡೆದವರು ಸಂತಸ ಅನುಭವಿಸುತ್ತಾರೆ. ಏಕೆಂದರೆ ಅವರಿಗೆ ನಿಜ ಬದುಕಿನ ಅರ್ಥದ ಅರಿವಿರುತ್ತದೆ. ಶರಣ ಬದುಕು ಎಂದರೆ ಎಲ್ಲವನ್ನೂ ತ್ಯಜಿಸುವುದಿಲ್ಲ. ಎಲ್ಲದರೊಳಗಿದ್ದೂ ಇಲ್ಲದಂತಿರುವುದು ಶರಣ ಬದುಕು.

ನಿಸರ್ಗವು ನಿಗೂಢತೆಯಿಂದ ಕೂಡಿದ್ದರೂ ಅದರ ಕ್ರಮಬದ್ಧವಾಗಿ ಹಾಗೂ ನಿಯಮಬದ್ಧವಾಗಿ ಸಾಗಿದೆ. ಮನುಷ್ಯನ ಬದುಕು ಇದಕ್ಕೆ ತದ್ವಿರುದ್ಧವಾಗಿ ಸಾಗಿದೆ. ಬದುಕಿನ ನೈಜತೆಯತ್ತ ಮನುಷ್ಯನ ಗಮನವಿಲ್ಲ. ಅವನ ಲಕ್ಷ್ಯವಿರುವುದೆಲ್ಲ ಬಹಿರಂಗದ ಸೌಂದರ್ಯದ ಕಡೆಗೆ. ನಿಸರ್ಗ ರೂಪ, ರಸ, ಗಂಧ, ಶಬ್ದ, ಸ್ಪರ್ಶಗಳಲ್ಲಿ ವೈವಿಧ್ಯತೆ ಹೊಂದಿದ್ದರೂ ಅವುಗಳೆಲ್ಲವನ್ನೂ ಅದು ಹಾಗೆ ಉಳಿಸಿಕೊಂಡು ಬಂದಿದೆ. ಆದರೆ ಪ್ರಕೃತಿಯ ಕೂಸಾಗಿ ಬೆಳೆದ ಮನುಷ್ಯ ಮಾತ್ರ ರೂಪ ಬದಲಾಯಿಸುತ್ತಾ ಬರುತ್ತಿದ್ದಾನೆ. ಗಿಡದಲ್ಲಿ ಅರಳಿದ ಹೂವಿಗಿರುವ ಸುವಾಸನೆ, ಗಿಡದಲ್ಲಿ ಹುಟ್ಟಿಗಿರುವ ಹಣ್ಣಿನ ರುಚಿ ಪ್ಲಾಸ್ಟಿಕ್ ಹೂವಿಗಾಗಲಿ, ಹಣ್ಣಿಗಾಗಲಿ ಇಲ್ಲ. ಅಂದರೆ ಕೃತಕತೆಗೆ ಬೆಲೆ ಇಲ್ಲ. ಆದರೆ ನಾವು ಇಂದು ಕೃತಕತೆಯ ಬೆನ್ನು ಹತ್ತಿ ಜೀವಂತಿಕೆ ಮರೆಯುತ್ತಿದ್ದೇವೆ. ತಾಯಿಯ

ಎದೆಹಾಲು ಕುಡಿದ ಮಕ್ಕಳೇ ಬದುಕದಿರುವಾಗ, ವಿಷ ಕುಡಿದವರು ಬದುಕುವರೇ? ನ್ಯಾಯ-ಧರ್ಮಯುತವಾಗಿ ಸಾಗಿ ಬಂದ ಬದುಕಿನ ಯಾತ್ರೆಯನ್ನು ಮುಂದುವರಿಸುವುದಕ್ಕೆ ಮನುಷ್ಯ ಸತತ ತಪ್ಪು-ಸರಿಗಳನ್ನು ಆಯ್ಕೆ ಮಾಡಿಕೊಂಡು ಹೋಗುತ್ತಿದ್ದಾನೆ, ಮೌಲ್ಯಗಳನ್ನು ಅಪಮೌಲ್ಯಗೊಳಿಸುತ್ತಿದ್ದಾನೆ. ಜೀವನ ನಿರ್ವಹಣೆಗೆ ಕ್ರಮಬದ್ಧತೆ ಬಹಳ ಮುಖ್ಯ. ಶರಣರದು ಕ್ರಮಬದ್ಧ ಬದುಕಾಗಿರುವುದರಿಂದ ಅವರು ಎಂದೆಂದಿಗೂ ಜೀವಂತ.

ಆಧುನೀಕರಣ, ಜಾಗತೀಕರಣದಿಂದ ನಾವು ಅಸಂಗತ ಆಚಾರ-ವಿಚಾರಗಳಿಂದ ಪ್ರಭಾವಿತಗೊಂಡಿದ್ದೇವೆ. ಬದುಕನ್ನು ಕಟ್ಟಿಕೊಡುವ ಕಾಯಕದಲ್ಲಿಯೂ ಮೀನಾಮೇಷ ಎಣಿಸುತ್ತಿದ್ದೇವೆ. ಸತ್ಯ-ಶುದ್ಧ ಕಾಯಕದಲ್ಲಿ ತೊಡಗಿಸಿಕೊಳ್ಳುವುದು ಬದುಕಿನ ಧನ್ಯತೆ. ಸಹಜತೆ ಬದುಕಿನ ಸಂಪತ್ತು, ವಿಪರೀತ ಬದುಕಿನ ಆಪತ್ತು. ಅದನ್ನು ತಿಳಿದುಕೊಂಡ ಸಹ ಮನುಷ್ಯ ವಿಪರೀತದ ಹಿಂದೆ ಬೆನ್ನತ್ತಿದ್ದಾನೆ. ಜೀವನಕ್ಕೊಂದು ಸ್ಪಷ್ಟ ಗುರಿಯನ್ನು ಇಟ್ಟುಕೊಳ್ಳದೆ ಕಂಡ ಕಂಡ ದಾರಿಯಲ್ಲಿ ಹೋಗುವವರಿಗೆ ಅನುಭವವೇ ನೆಲೆಗೊಳ್ಳದು, ಇನ್ನೂ ಅನುಭಾವವೆಲ್ಲಿಂದ ನೆಲೆಗೊಳ್ಳುವುದು? ಬದುಕಿನ ಬಿಕ್ಕಟ್ಟುಗಳು, ಉಪದ್ರವಗಳು ದೂರವಾಗಬೇಕಾದರೆ ಪ್ರತಿ ವ್ಯಕ್ತಿಯು ತನ್ನ ದೇಹದ ಶುಚಿತ್ವವನ್ನು ಕಾಪಾಡಿಕೊಂಡು ತನ್ನ ಶಕ್ತಿಯನ್ನು ಸದ್ವಿನಯ ಸದಾಚಾರಕ್ಕೆ ವಿನಿಯೋಗಿಸಿಕೊಂಡು ನಡೆಯಬೇಕು ಎಂಬುದು ಶರಣರ ನಿಲುವು.

ಪ್ರಾಣಿಗಳಲ್ಲಿ ಶ್ರೇಷ್ಠ ಪ್ರಾಣಿ ಮನುಷ್ಯ ಪ್ರಾಣಿ. ಒಂದೊಂದು ಪ್ರಾಣಿಗೂ ಒಂದೊಂದು ವಿಶಿಷ್ಟ ಗುಣವಿರುವುದು. ಈ ಜಗತ್ತು ಗುಣವಿಶೇಷತೆಯಿಂದ ಕೂಡಿದೆ. ಆದರಿಂದು ಮನುಷ್ಯ ತನ್ನ ಬದುಕನ್ನು ನಿರ್ವಹಿಸುವ ಭರಾಟೆಯಲ್ಲಿ ತನ್ನದಲ್ಲದಕ್ಕೂ ಕೈಚಾಚುವ, ಕಬಳಿಸುವ, ಹೊಂಚು ಹಾಕಿ ದೋಚುವ, ನಂಬಿಸಿ ಕುತ್ತಿಗೆ ಕೊಯ್ಯುವ ಹೀನಕೃತ್ಯಗಳಲ್ಲಿ ಸಾಗುತ್ತಿದ್ದಾನೆ. ವಿವೇಚನಾರಹಿತ ನಡೆ-ನುಡಿ ಮನುಷ್ಯನ ಅಧಃಪತನಕ್ಕೆ ಕಾರಣವಾಗಿದೆ. ಗುಣಸಂಪತ್ತೇ ಮನುಷ್ಯನ ನಿಜವಾದ ಸಂಪತ್ತು. ಅದುವೇ ಅವನ ಬದುಕಿನ ಸಡಗರವಾಗಿದೆ. ಆದರೆ ಮನುಷ್ಯನಿಂದು ಅದನ್ನೇ ಮರೆಯುತ್ತಿದ್ದಾನೆ. ಸೋಲು ಅಥವಾ ತಿಳುವಿಲ್ಲದೆ ಮನುಷ್ಯನೆಸಗುವ ತಪ್ಪು ಮನುಷ್ಯ ಬದುಕಿನ ಕೊನೆಯಲ್ಲ, ಅದರಾಚೆಯೂ ಬದುಕಿದೆ. ಇದನ್ನು ಅರ್ಥಮಾಡಿಕೊಂಡು ಸಿಗುವ ಅವಕಾಶಗಳನ್ನು ಬಳಸಿಕೊಂಡು ಸುಂದರವಾಗಿ ಬದುಕು ಕಟ್ಟಿಕೊಳ್ಳುವ ಆಶಾವಾದಿಗಳಾಗಬೇಕು. ನಿಜವಾದ ಭಕ್ತಿ ಹಾಗೂ ಶ್ರದ್ಧೆಯೇ ಜೀವನದ ನಿಜವಾದ ಧೀಮಂತ ಶಕ್ತಿ. ಇದರಿಂದ ಮನುಷ್ಯನ ಜೀವನಕ್ಕೆ ಭವ್ಯತೆ ಹಾಗೂ ದಿವ್ಯತೆ ಪ್ರಾಪ್ತವಾಗುವುದು. ಅರಿವಿಲ್ಲದ ಉಪದೇಶ ಬಂಡೆಗಲ್ಲಿನ ಮೇಲೆ ನೀರು ಸುರಿದಂತೆ. ಅರಿವಿನಿಂದ ಕೂಡಿದ ಉಪದೇಶ ಮಾತ್ರ ಫಲಪ್ರದವಾಗುವುದು.

ಮಾನವನ ಬದುಕಿನೊಳಗೆ ಏಕತೆಯನ್ನು ಸಾಧಿಸುವುದೆಂದರೆ ಅರಿವಿನಂತೆ ಆಚಾರವನ್ನು ರೂಢಿಗೊಳಿಸುವುದಾಗಿದೆ. ಆಧುನಿಕಯುಗದೊಳಗೆ ಅನೇಕ ಸವಲತ್ತುಗಳಿದ್ದರೂ ಸಾಧನೆಯ ಶಿಖರವನ್ನೇರಿದ್ದರೂ ಮನುಕುಲವು ಶಾಂತಿ–ನೆಮ್ಮದಿಗೆ ಹಪಹಪಿಸುತ್ತಲಿದೆ. ಮನುಷ್ಯ ಶಾಂತಿ–ನೆಮ್ಮದಿ ಪಡೆದುಕೊಳ್ಳಬೇಕಾದರೆ ಸತ್ಯ, ಸದಾಚಾರಗಳನ್ನು ಬೆಳೆಸಿಕೊಂಡು ಮನೋಕ್ಲೇಷಗಳನ್ನು ಬಿಟ್ಟು ಬದುಕುವುದನ್ನು ಕಲಿಯಬೇಕಾಗಿದೆ. ಸತ್ಯ–ಶುದ್ಧ ಸ್ವಹಿತ–ಪರಹಿತ ಕಾರ್ಯಗಳನ್ನು ಮಾಡುತ್ತ ಬದುಕಬೇಕು. ಇದು ಆತ್ಮನಿವೇದನೆಯ ದ್ಯೋತಕವೇ ಆಗಿದೆ. ನಾವು ನಮ್ಮನ್ನು ವಿಧಾಯಕ ಕಾಯಕದೊಳಗೆ ತೊಡಗಿಸಿಕೊಂಡು ಬದುಕಿದಷ್ಟು ಭವ್ಯತೆಯು ಸಾಧ್ಯವಾಗುತ್ತದೆ. ಧನ್ಯತೆಯುಳ್ಳ ನೈವೇದ್ಯ ಭವ್ಯತೆಗೆ ಅರ್ಪಿತಗೊಳ್ಳುತ್ತದೆ. ಬದುಕನ್ನು ಉನ್ನತೀಕರಿಸುವ ಮಾರ್ಗಗಳಲ್ಲಿ ದಾರ್ಶನಿಕತೆಯೂ ಒಂದು. ಮನುಷ್ಯನೆಸಗುವ ತಪ್ಪುಗಳನ್ನು ತಿದ್ದುವ ತೀಡುವ ಕಾರ್ಯದಲ್ಲಿ ದಾರ್ಶನಿಕತೆಯು ಮಹತ್ತರ ಪಾತ್ರ ವಹಿಸುತ್ತದೆ. ನಾನಾರು? ಎಂಬುದರ ಅರಿವೇ ಏಕೋಭಾವ. ಏಕೋಭಾವ ಬಲಿತು ಬಲಗೊಂಡಾಗ ಸಹನೆ–ಸಂಯಮದಿಂದ ಭವಬಂಧನ ಬಿಡುಗಡೆಯಾಗುತ್ತದೆ.

ತಪ್ಪನ್ನು ಅಪ್ಪಿಕೊಂಡು ಬದುಕುವವ ಭವಿ, ತಪ್ಪನ್ನು ಒಪ್ಪಿಕೊಂಡು ಮತ್ತೊಮ್ಮೆ ತಪ್ಪು ಎಸಗದಂತಹ ತಪಸ್ವಿ. ಮನುಷ್ಯ ಸಹಜವಾಗಿದ್ದ, ಸರಳವಾಗಿದ್ದ ತನ್ನ ಬದುಕನ್ನು ಸಂಪತ್ತು, ಅಧಿಕಾರ, ಕೀರ್ತಿ ಪ್ರತಿಷ್ಠೆಯ ಬೆನ್ನು ಹತ್ತಿ ಸಂಕೀರ್ಣಗೊಳಿಸಿಕೊಂಡಿದ್ದಾನೆ. ಧರ್ಮದ ಹೆಸರಿನಲ್ಲಿ ಡಾಂಬರಾಟ ಆರಂಭಿಸಿದ್ದಾನೆ. ದೈವೀಭಕ್ತಿಯೇ ದೇವರನ್ನೊಲಿಸಿಕೊಳ್ಳುವ ಸಾಧನ. ಭಕ್ತಿಗೆ ಸೋಲದ ಶಕ್ತಿಯಿಲ್ಲ. ಭಕ್ತಿಗೆ ಭವವನ್ನು ಗೆದ್ದು ಶಿವಸಾಮೀಪ್ಯ ಪಡೆಯುವ ಶಕ್ತಿ ಇದೆ.

ಬದುಕಿಗೆ ಪೂರಕ–ಪೋಷಕವಾಗಿರುವ ಘನವೆತ್ತ ನಡೆ–ನುಡಿಯೊಳಗೆ ಆಸಕ್ತಿಯನ್ನಿಟ್ಟುಕೊಂಡು ಬದುಕನ್ನು ಸಾಗಿಸುವುದೇ ತೀರ್ಥಯಾತ್ರೆ. ಅರಿತು ನಡೆದರೆ ಬದುಕು ಸಂಪತ್ತು, ಮರೆತು ನಡೆದರೆ ಬದುಕು ಆಪತ್ತು. ಮನುಷ್ಯನ ಬದುಕಿನಲ್ಲಿ ಸಂಭಾಷಣೆಗೆ ಎಲ್ಲಿಲ್ಲದ ಮಹತ್ವವಿದೆ. "ಮಾತೇ ಮುತ್ತು, ಮಾತೇ ಮೃತ್ಯು" ಎನ್ನುವ ಹಾಗೆ ಮಾತು ಮಹೋನ್ನತಿಗೂ ಒಯ್ಯಬಲ್ಲದು, ಅಧೋಗತಿಗೂ ತಳ್ಳಬಲ್ಲದು. ಸತ್ಸಂಗದ ಸಂಭಾಷಣೆ ಮಾನವನ ಉನ್ನತಿಯ ಏಣಿ. ಸತ್ಯದ ಅಂತಿಮ ವ್ಯಾಖ್ಯಾನ ಮೌನ. ಶಬ್ದ ನಿಶ್ಯಬ್ದದೊಳಗೆ ಅಡಗಿದಾಗ ನಿಜದ ನಿಲುವು ಪ್ರಕಟವಾಗುವುದು. ವಿಲಾಸಿ ಜೀವನ ಅಧಃಪತನಕ್ಕೆ ಸೋಪಾನ. ಅರಿವಿನ ಜೀವನ ಸತ್ಪಥಕ್ಕೆ ಸಂಚಲನ. ಡಾಂಭಿಕತನ ಮಾಡುವ ಭಂಡ ಜನ ಎಲ್ಲ ಕಾಲದಲ್ಲೂ ಇರುವರು. ಆದರೆ ಆತ್ಮಸಾಕ್ಷಿಯನ್ನು ವಂಚಿಸಿ ಬದುಕಲು ಸಾಧ್ಯವಿಲ್ಲ. ಹೊರ–ಒಳಗಿನ ಉಭಯ ಭ್ರಷ್ಟತೆ ಅಳಿದಾಗ ಸತ್ಯ ಸಾಕ್ಷಾತ್ಕಾರ.

ತನ್ನ ತಾನರಿತು ಸತ್ಯದ ಪರವಾಗಿ ನಿಂತು ಸತ್ಯ ಶುದ್ಧ ಕಾಯಕವನ್ನೇ ಬದುಕನ್ನಾಗಿಸಿಕೊಂಡವರು ನಿಜ ಶರಣರು. ಮನುಷ್ಯ ಮನುಷ್ಯನಾಗಿ ಮಾತನಾಡದಿರುವುದಕ್ಕೆ, ಅಮಾನುಷ ಕೆಲಸ–ಕಾರ್ಯಗಳಿಗೆ ತೊಡಗಿರುವುದಕ್ಕೆ ಶಬ್ದ, ಸ್ಪರ್ಶ, ರೂಪ, ರಸ, ಗಂಧ – ಎಂಬ ಪಂಚ ವಿಷಯಗಳು; ಪಂಚೇಂದ್ರಿಯಗಳು, ಸಪ್ತಧಾತು, ಅಷ್ಟಮದಗಳೇ ಕಾರಣ. ಇವುಗಳ ಅಡಿಯಾಳಗಿರುವ ಮನುಷ್ಯ ಇವುಗಳನ್ನು ಆಳುವಂತವನಾಗಬೇಕು ಅದೇ ನಿಜವಾದ ಸಾಧನೆ, ಮುಕ್ತಿಗೆ ಹೆದ್ದಾರಿ. ನಿಜದ ನೆಲೆ ಅರಿಯಬೇಕಾದರೆ ತನ್ನ ತಾನು ಅರಿಯಬೇಕು. ಅರಿವಿನ ಬಾಳು ಸಾರ್ಥಕತೆಯ ಸಂಕೇತ. ಮರೆವಿನ ಬಾಳು ಗೋಳಿನ ಸಂಕೇತ. ತಾಳ್ಮೆಯಿಂದ ತಾಕಲಾಟಗಳನ್ನು ಬಿಡಿಸಿಕೊಳ್ಳಬೇಕು.

ಈ ಬದುಕು ಅತ್ಯಂತ ರೋಚಕ, ಸರ್ವ ಸುಂದರ ಸತ್ಯಗಳ ತಾಣ. ಓದು–ವಿದ್ಯೆ ಡಾಂಭಿಕಾಚಾರಕ್ಕಲ್ಲ. ಇಂದಿನ ಬದುಕು ಓದಿನಿಂದ ವಿಮುಖಗೊಂಡಿದೆ. ವಿದ್ಯಾಪೀಠಗಳು, ಧರ್ಮಪೀಠಗಳು, ಅಧಿಕಾರ ಪೀಠಗಳು ವಾಣಿಜ್ಯ ವ್ಯವಹಾರದ ಕೇಂದ್ರಗಳಾಗಿವೆ. ಆಡಂಬರ, ವೈಭವದಿಂದ ಮೆರೆಯುತ್ತಲಿವೆ. ವಿದ್ಯೆ, ಜ್ಞಾನಗಳಿಗೆ ಬೆಲೆ ಇಲ್ಲದಂತಾಗಿದೆ. ಇಂದಿನ ಬಹುತೇಕ ವಿದ್ಯಾಪೀಠಗಳು, ಧರ್ಮಪೀಠಗಳು ಬದುಕಿನ ಮೂಲ ಸ್ವರೂಪ, ಸ್ವಭಾವವನ್ನು ಕಳೆಯುವುದರಲ್ಲಿ ನೈಪುಣ್ಯತೆ ಮತ್ತು ಕೌಶಲ್ಯವನ್ನು ಹೊಂದಿವೆ. ಯಾರೂ ಯಾರನ್ನೂ ನಂಬದ ರೀತಿಯಲ್ಲಿ ವೇಷಧಾರಿ–ನಾಮಧಾರಿಗಳಾಗಿ ಮನುಷ್ಯನನ್ನೇ ಮರೆಮಾಡಿವೆ.

ಮನುಕುಲವು ಬದುಕಲು ಇರುವ ನಡೆ–ನುಡಿಗಳನ್ನು ಸಾರ್ವತ್ರಿಕಗೊಳಿಸಿ ಸಜ್ಜುಗೊಳಿಸಿಕೊಂಡು, ಬಳಸಿಕೊಂಡು ದಿವ್ಯತೆಯನ್ನು ಪಡೆಯಬೇಕಾಗಿದೆ. ನಿಸರ್ಗ ಮನುಷ್ಯನನ್ನು ಸೃಷ್ಟಿಸಿ, ಎಲ್ಲವನ್ನೂ ಮನುಷ್ಯ ಬದುಕಿಗೆ ದಯಪಾಲಿಸಿ ಅದು ಸಾಕ್ಷಿರೂಪದೊಳಗೆ ಉಳಿಸಿಕೊಂಡಿದೆ. ಈ ಭೂಮಿ ಮನುಷ್ಯನ ದುರಾಡಳಿತ, ದಬ್ಬಾಳಿಕೆಯ ಮನೋವೃತ್ತಿಯ ವಿಕಾರಗಳನ್ನು ಅತ್ಯಂತ ಯಾತನೆಯಿಂದ ಸಹಿಸಿಕೊಂಡಿದೆ. ಆಗಾಗ ನಿಸರ್ಗವು ರೌದ್ರಾವತಾರ ತಾಳಿ ಮನುಷ್ಯನ ದರ್ಪಕ್ಕೆ ಬಿಸಿ ಮುಟ್ಟಿಸಿದೆ. ಭೂಮಿಯು ಈ ಜೀವಜಗತ್ತಿನ ವೈಶಿಷ್ಟದ ಪರಮಧಾಮವಾಗಿ ಪರಸ್ಪರ ಹಿತವನ್ನು ಕಾಪಾಡುವ ಏಕೈಕ ತಾಣವಾಗಿದೆ. ಹಾಗೆಯೇ ಎಲ್ಲ ಜೀವರಾಶಿಗಳಲ್ಲಿ ಮನುಷ್ಯ ಶ್ರೇಷ್ಠ ಜೀವಿ ಎನಿಸಿಕೊಂಡಿದ್ದಾನೆ. ಮನುಷ್ಯ ಜಾಗೃತನಾಗಿ ಭೂಮಿ ಮತ್ತು ಮನುಷ್ಯ ಸಮತೋಲನ ಕಾಯ್ದುಕೊಂಡರೆ ಬದುಕು ಶ್ರೇಷ್ಠ ಆಗುತ್ತದೆ.

ಮನುಷ್ಯನ ಬದುಕು ಅರಿವುಗೇಡಿತನಕ್ಕೆ ಗುರಿಯಾಗಬಾರದೆಂದು ಅನಾದಿಕಾಲದಿಂದಲೂ ಪ್ರಯತ್ನ ನಡೆಯುತ್ತಲೇ ಬಂದಿದೆ. ಮನುಷ್ಯ ತನ್ನ ಈ ಇರುವಿಕೆಗಾಗಿ ಬಹಳಷ್ಟು ಪ್ರಯಾಸಪಟ್ಟು ನಿರ್ಣಯಿಸಿಕೊಂಡ ವ್ಯವಸ್ಥೆಗಳು ಭಿನ್ನ

ಭಾವಕ್ಕೆ ಎಡೆ ಮಾಡಿವೆ. ಹಿರಿಯರೆಂದು ಹೇಳಿಕೊಳ್ಳುತ್ತ ಸಂಕುಚಿತ ನೆಲೆಯೊಳಗೆ ಜನರನ್ನು ತಪ್ಪು ದಾರಿಗೆ ಎಳೆದು ತಮ್ಮ ಆಸೆ–ಆಕಾಂಕ್ಷೆ, ಅಧಿಕಾರ–ಕೀರ್ತಿ, ಸಂಪತ್ತು, ಆಳ್ವಿಕೆ, ಉದ್ಯೋಗ ಗಟ್ಟಿಗೊಳಿಸುವ ಹಿರಿಯರ ಆಟ–ನೋಟ–ಪ್ರವಚನಗಳೆಲ್ಲವೂ ನಾಚಿಕೆಯನ್ನು ತರುವಂತಾಗಬಾರದೆಂಬ ಶರಣರ ಎಚ್ಚರಿಕೆಯು ಮಾನವ ಅಭಿವೃದ್ಧಿ ಸಾಧನೆಗೂ ಸೂತ್ರವಾಗಿದೆ ಮತ್ತು ಜಾಗತಿಕ ಮಾನವ ಹಕ್ಕುಗಳನ್ನು ಅನುಸರಿಸುವ ಕಾರ್ಯಸೂಚಿಯಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಶಿವಾನಂದ ಕೆಳಗಿನಮನಿ (ಸಂ), (2012), ವಚನ ಸಾಹಿತ್ಯ, ಕನ್ನಡ ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ.
2. ಚಿದಾನಂದಮೂರ್ತಿ ಎಂ., (2015), ವಚನ ಸಾಹಿತ್ಯ: ಸಂಪುಟ–05, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
3. ಹೂಗಾರ ಎ.ಬಿ. (ಸಂ), (2019), ವಚನ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
4. ಚಿಕ್ಕಮಾದು ಎನ್.ಎನ್., (2006), ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯಗಳ ಸಮೀಕ್ಷೆ, ಪ್ರಸಾರಾಂಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.